ಅ) ಕೃಷಿ ಪಂಪುಸೆಟ್ಟಿಗೆ ವಾರ್ಷಿಕ ವಿದ್ಯುತ್ ದರ ಅರ್ಧವನ್ನು ಇಳಿಸಲು ಸರ್ಕಾರ ಏಂದು ತೀರ್ಮಾನ ತೆಗೆದುಕೊಂಡಿದೆ ?

ಆ) ಈ ತೀರ್ಮಾನದಿಂದ ರಾಜ್ಯದ ಸುಮಾರು ಎಷ್ಟು ಜನ ರೈತರಿಗೆ ಅನುಕೂಲವಾಗಿದೆ. ?

ಇ) ಎಷ್ಟು ಅಶ್ವಶಕ್ತಿಯ ಪಂಪುಸೆಟ್ಟುಗಳಿಗೆ ಈ ವಿನಾಯಿತಿ ಅನ್ವಯಿಸುತ್ತದೆ ?

ಈ) ಈ ರಿಯಾಯಿತಿಯಿಂದ ಸರ್ಕಾರಕ್ಕೆ ಆಗುವ ಹೊರೆಯೆಷ್ಟು ?

ಉ) ಸರ್ಕಾರದ ಈ ತೀರ್ಮಾನಕ್ಕೆ ಮೊದಲು ಪಂಪುಸೆಟ್ಟುಗಳ ವಿದ್ಯುತ್ ಬಿಲ್ ಬಾಕಿ ಇರುವವರಿಗೂ ಈ ವಿನಾಯಿತಿ ಅನ್ವಯಿಸುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) 10 ಹೆಚ್. ಪಿ. ಮತ್ತು ಕೆಳಗಿನ ಕೃಷಿ ಪಂಪುಸೆಟ್‌ಗಳಿಗೆ ವಿದ್ಯುತ್ ಶುಲ್ಕವನ್ನು ಸೆಪ್ಟೆಂಬರ್ 1990 ರಿಂದ ಶೇಕಡ 50 ಕ್ಕೆ ಇಳಿಸಲಾಗಿದೆ.

ಆ) ಈ ರಿಯಾಯಿತಿ ದರದಿಂದ 30–10–1990 ರಲ್ಲಿರುವಂತೆ ಸುಮಾರು 6,75,000 ರೈತರುಗಳಿಗೆ ಅನುಕೂಲವಾಗಿದೆ.

ಇ) 10 ಮತ್ತು ಕೆಳಗಿನ ಅಶ್ವಶಕ್ತಿಯ ಪಂಪುಸೆಟ್ಟುಗಳಿಗೆಲ್ಲಾ ಅನ್ವಯಿಸುತ್ತದೆ.

ಈ) ಈ ರಿಯಾಯಿತಿಯಿಂದ 1990–91 ನೇ ಸಾಲಿನಲ್ಲಿ ಸುಮಾರು ₹16 ಕೋಟಿ ರೂ. ಗಳ ಅಧಿಕ ಹೊರೆ ಆಗುವುದೆಂದು /ಅಂದಾಜು ಮಾಡಲಾಗಿದೆ.

ಉ) ಸೆಪ್ಟೆಂಬರ್ 1990 ಮತ್ತು ನಂತರ ಬರುವ ಬಿಲ್ಲುಗಳಿಗೆ ಮಾತ್ರ ಅನ್ವಯಿಸುತ್ತದೆ.

ವಿಷಯ :– ಶಹಬಾದದಲ್ಲಿ ರೇಲ್ವೆಯ ಮೇಲ್ಮಟ್ಟದ ಸೇತುವೆ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 488 (1099)

ಶ್ರೀ ಬಿ. ಎಸ್. ಚವ್ಹಾಣ (ಶಹಬಾದ್) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಬಾದ್‌ನಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕಟ್ಟುತ್ತಿರುವ ರೇಲ್ವೆಯ ಮೇಲ್ಮಟ್ಟದ ಸೇತುವೆ ಯಾವಾಗ ಪೂರ್ಣಗೊಳ್ಳುವುದು ?

ಆ) ಈ ಸೇತುವೆಗಾಗಿ (ರೇಲ್ವೆ ಓವರ್ ಬ್ರಿಡ್ಜ್) ಒಟ್ಟು ಖರ್ಚು ಮಾಡುತ್ತಿರುವ ಹಣವೆಷ್ಟು ?

ಇ) ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು ? ಮತ್ತು ಉಳಿದ ಹಣವೆಷ್ಟು ?

ಈ) ಈ ಕೆಲಸವು ಬೇಗನೆ ಮುಗಿಸಲಾಗುವುದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ರೇಲ್ವೆ ಮೇಲ್ಮಟ್ಟದ ಸೇತುವೆಯು ರೇಲ್ವೆ ಇಲಾಖೆಯಿಂದ ಪೂರ್ಣಗೊಂಡಿದೆ. ಸೇತುವೆಗೆ ರಸ್ತೆ ನಿರ್ಮಾಣದ ಕೆಲಸವನ್ನು ಲೋಕೋಪಯೋಗಿ ಇಲಾಖೆ ವಿಭಾಗದಿಂದ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಯನ್ನು ಟೆಂಡರ್ ಕರಾರಿನ ಪ್ರಕಾರ 1992 ರ ಡಿಸೆಂಬರ್ 14ರ ಲ್ಲಿ ಸಂಬಂಧಪಟ್ಟ ಗುತ್ತಿಗೆದಾರರು ಮುಗಿಸಬೇಕಾಗಿದೆ.

ಆ) 53.85 ಲಕ್ಷ ರೂ. ಗಳ ಅಂದಾಜು ಪಟ್ಟಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ತಾಂತ್ರಿಕವಾಗಿ ಮಂಜೂರಾದ ಅಂದಾಜು ಪತ್ರಿಕೆಯ ಪ್ರಕಾರ 60.78 ಲಕ್ಷ ರೂ. ಗಳನ್ನು ಖರ್ಚು ಮಾಡಬೇಕಾಗಿದೆ.

ಇ) 1) ನವೆಂಬರ್ 1990 ರ ಅಂತ್ಯದವರೆಗೆ ಖರ್ಚಾದ ಹಣ ರೂ. 12.311ಲಕ್ಷ ರೂ.ಗಳು.
2) ಬಾಕಿ ಖರ್ಚು ಮಾಡಬೇಕಾದ ಹಣ ರೂ. 48.469ಲಕ್ಷ ರೂ.ಗಳು.

ಈ) ಸದರಿ ಕಾಮಗಾರಿಯನ್ನು 1992 ರ ಡಿಸೆಂಬರ್ ವೇಳೆಗೆ ಪೂರ್ಣಗೊಳಿಸಲಾಗುವುದು.